ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಅಧಿಕಾರವಿಲ್ಲದೆ ಹೇಗೆ ಕೊಡಿಸುವುದು ?

(ಉತ್ತರವಿಲ್ಲ)

ಶ್ರೀ ಟಿ. ಹನುಮಯ್ಯ.—ರಾಜ್ಯಾಂಗದ 23 (1) ವಿಧಿಗೆ ವಿರೋಧವಾಗಿ ನಡೆಯುತ್ತಿದೆ. 23 (1)ನೆಯ ವಿಧಿ "Traffic in human beings and forced labour.....shall be punishable in accordance withlaw." ಎಂದಿದೆ. ಈ ವಿಧಿ ಜಾರಿಗೆ ಬಂದಿದೆಯೆ ?

ಶ್ರೀ ಎಂ. ಪಿ. ಪಾಟೀಲ್.—ಬಂದಿದೆ.

ಶ್ರೀ ಟಿ. ಹನುಮಯ್ಯ.—ಹಾಗಿದ್ದರೆ ಇದರ ಪ್ರಕಾರ ಯಾರನ್ನಾದರೂ ಶಿಕ್ಷೆ ಮಾಡಿದ್ದಾರೆಯೇ ? ರಾಜ್ಯಾಂಗದ ಪ್ರಕಾರ ಏನೂ ಕೊಡದೆ ಕೆಲಸಮಾಡಿಸಿಕೊಳ್ಳ ಬಾರದು.

ಅಧ್ಯಕ್ಷರು.—ಪ್ರಶ್ನೆ ಕೇಳಿ, ಚರ್ಚೆಮಾಡಬೇಡಿ; ನಾಳೆ ಬಜೆಟ್ ಚರ್ಚೆಯಲ್ಲಿ ಬೇಕಾದರೆ ಮಾತನಾಡ ಬಹುದು.

ಶ್ರೀ ಟಿ. ಹನುಮಯ್ಯ.—ಭಾರತ ರಾಜ್ಯಾಂಗದ 23 (1) ಮತ್ತು (2)ನೆಯ ವಿಧಿಯ ಪ್ರಕಾರ ನುಮ್ಮನೆ ಸೇವೆ ತೆಗೆದುಕೊಳ್ಳಬಾರದು, ಹಾಗೆ ತೆಗೆದುಕೊಂಡಿದ್ದರೆ ಅಂಥವರನ್ನು ಶಿಕ್ಷಮಾಡಿದ್ದಾರೆಯೆ, ಜುಲ್ಮಾನೆ ವಿಧಿಸಿದ್ದಾರೆಯೆ ಎಂಬುದನ್ನು ದಯೆಯಿಟ್ಟು ತಿಳಿಸಬೇಕು.

Mr. SPEAKER.—That question is a very big one.

Sri M. P. PATIL.—I have replied that the Constitution is in force in Mysore and that is being followed.

Grant for the construction of School Buildings in the Bombay Karnatak Area.

Q.—600. Sri H. V. KOUJALGI (Sampagaon I).—

Will the Government be pleased to state :—

(*a*) the amount of grant given for the purpose of constructing new school buildings under the District Building Scheme to Belgaum, Dharwar, Bijapur and Karwar Districts for the year 1957-58;

(*b*) if not given, the reason therefor ?

A.—Sri V. VENKATAPPA (Minister for Education).—

(*a*) A sum of Rs. five lakhs has been provided in the current year's budget for payment of loans to District School Boards in the Bombay-Karnatak area for construction of school buildings. Of this amount, a loan of Rs. 2,50,000 has been sanctioned to the District School Board, Bijapur, and the Director of Public Instruction has been authorised to utilise and allot the balance of Rs. 2,50,000 equitably to the other three districts of the Bombay-Karnatak area during the current year consistent with the claims which have become ripe in those districts.

(*b*) Does not arise in view of reply to clause (*a*) above.

Sri H. V. KOUJALGI.—May I know, Sir, to whom it is to be written ?

ಶ್ರೀ ವಿ. ವೆಂಕಟಪ್ಪ.—ಡೈರೆಕ್ಟರಿಗೆ ಬರೆದರೆ ಅವರು ಸರ್ಕಾರಕ್ಕೆ ತಿಳಿಸುತ್ತಾರೆ.

Sri H. V. KOUJALGI.—Is it brought to the notice of the Government that this amount has not yet been paid to any District Board except Dharwar ?

ಶ್ರೀ ವಿ. ವೆಂಕಟಪ್ಪ.—ಅದಕ್ಕೆ ಮೊನ್ನೆ ಹೇಳಿದ್ದೇನೆ. ಜಿಲ್ಲಾಬೋರ್ಡಿನ ಪ್ರೆಸಿಡೆಂಟರು ಒಂದು ಕಾಗದವನ್ನು ಬರೆದುಕೊಡಬೇಕು. ಇನ್ನೂ ಅವರು ಬರೆದುಕೊಟ್ಟಿಲ್ಲ, ಆದುದರಿಂದ ಹಣವನ್ನು ಪಾವತಿ ಮಾಡಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಆ ಹಣ ಮಂಜೂರಾದದ್ದು ಯಾವಾಗ ?

ಶ್ರೀ ವಿ. ವೆಂಕಟಪ್ಪ.—10ನೇ ಸೆಪ್ಟೆಂಬರ್ 1957 ಮತ್ತು 8ನೆಯ ಅಕ್ಟೋಬರ್ 1957 ರಲ್ಲಿ.

ಶ್ರೀ ಎ. ಜೆ. ದೊಡ್ಡಮೇಟಿ.—ಮೈನೂರು ರೂಲ್ಸ್ ಮುಂಬಯಿ ಕರ್ನಾಟಕಕ್ಕೆ ಅನ್ವಯಿಸಿದ್ದು ಯಾವಾಗ?

ಶ್ರೀ ವಿ. ವೆಂಕಟಪ್ಪ.—ಅಲ್ಲಿ ಮೊದಲನಿಂದಲೂ ಜಾರಿಯಲ್ಲಿದ್ದ ಪದ್ಧತಿಯೇ ಇತ್ತು. 1ನೇ ಫೆಬ್ರವರಿ 1958ರಿಂದ ಮೈಸೂರು ರೂಲ್ಸ್ ಬಂತು.

ಶ್ರೀ ಎ. ಜೆ. ದೊಡ್ಡಮೇಟಿ.—ಮೈಸೂರು ರೂಲ್ಸ್ 1ನೆಯ ಫೆಬ್ರವರಿ 1958 ರಿಂದ ಅಲ್ಲಿಗೆ ಅನ್ವಯಿಸುತ್ತವೆ. ಸಾಲ ಮಂಜೂರಾದದ್ದು 10ನೆಯ ಸೆಪ್ಟೆಂಬರ್ 1957ರಲ್ಲಿ. ಈ ನಡುವಣ ಕಾಲದಲ್ಲಿ ಏಕೆ ಆ ಹಣವನ್ನು ಹಂಚಲಿಲ್ಲ ?

ಶ್ರೀ ವಿ. ವೆಂಕಟಪ್ಪ.—ಅವರು ಬರೆದುಕೊಟ್ಟಿಲ್ಲ, ಅದರಿಂದ ಹಂಚಲಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಬಾಂಡ್ ಬರೆದು ಕೊಡಬೇಕೆಂಬ ನಿಯಮ ಅಲ್ಲಿಗೆ ಅನ್ವಯಿಸುವುದಿಲ್ಲ ಅಲ್ಲವೆ ?

ಶ್ರೀ ವಿ. ವೆಂಕಟಪ್ಪ.—ಅಲ್ಲಿ ಯಾವ ಫಾರಂನಲ್ಲಿ ದೆಯೋ ಅದರಲ್ಲಿ ಅವರು ರುಜು ಮಾಡಿಕೊಡ ಬೇಕೆಂದಿದೆ, ಅಲ್ಲಿಯ ಪದ್ಧತಿಯ ಪ್ರಕಾರ.

ಶ್ರೀ ಸಿ. ಎನ್. ಹುಲ್ಕೋಟಿ.—ಧಾರವಾಡಕ್ಕೆ ಎಷ್ಟು ಮಂಜೂರುಮಾಡಿದರು ?

ಶ್ರೀ ವಿ. ವೆಂಕಟಪ್ಪ.—1,23,650 ರೂಪಾಯಿ ಕೊಟ್ಟಿದೆ.

ಶ್ರೀ ಎನ್. ವೈ. ಪಾಟೀಲ್.—ಬಿಜಾಪುರ ಜಿಲ್ಲಾ ಬೋರ್ಡಿನವರು ಎಷ್ಟು ಹಣ ಕೇಳಿದ್ದರು, ಎಷ್ಟು ಹಣ ಕೊಟ್ಟಿದ್ದಾರೆ ?

ಶ್ರೀ ವಿ. ವೆಂಕಟಪ್ಪ.—ಅವರು ಹೆಚ್ಚು ಬೇಕೆಂದು ಕೇಳಿದ್ದರು, 2,50,000 ರೂಪಾಯಿ ಕೊಟ್ಟಿದೆ

ಶ್ರೀ ಎಸ್. ವೈ. ಪಾಟೀಲ್.—ಅಷ್ಟು ಕಡಪೆ ಕೊಟ್ಟಿರುವುದರಿಂದ ಅಲ್ಲಿನ ಜನರಿಗೆ ಕಷ್ಟವಾಗುತ್ತದಲ್ಲವೆ?

ಶ್ರೀ ವಿ. ವೆಂಕಟಪ್ಪ.—ಬಡ್ಜೆಟ್‌ನಲ್ಲಿ ಒಟ್ಟು ಐದು ಲಕ್ಷ ರೂಪಾಯಿ ಒದಗಿಸಿದ್ದೇವೆ. 'ರೈಪ್' ಆಗಿರುವ ಕೇಸನ್ ಇನ್ನೂ ಬಂದರೆ, ಕೊಡುತ್ತೇವೆ.

ಶ್ರೀ ಜಿ. ಎಂ. ಕಬಾಡಿ.—ಅಕೌಂಟೆಂಟ್ ಜನರಲ್ ಅವರು ಹಳೆಯ ಮೈನೂರಿನ ಪದ್ಧತಿಯ ಪ್ರಕಾರ ಬಾಂಡ್ ಕೊಡಬೇಕೆಂದು ವಿದ್ಯಾಭ್ಯಾಸದ ಇಲಾಖೆಯವರಿಗೆ ತಿಳಿಸಿದುದು ನಿಜವೆ?

ಶ್ರೀ ವಿ. ವೆಂಕಟಪ್ಪ.—ಹಳೆಯ ಮೈನೂರಿನ ಪದ್ಧತಿಯ ಪ್ರಕಾರ ಅಲ್ಲ, ಬೊಂಬಾಯಿನಲ್ಲಿದ್ದ ಫಾರಂನಲ್ಲಿ ರುಜುಹಾಕಿಕೊಡಬೇಕೆಂದು ತಿಳಿಸಿದ್ದಾರೆ.

ಶ್ರೀ ಜಿ. ಬಿ. ಶಂಕರರಾವ್.—ಬಜೆಟ್‌ನಲ್ಲಿ ಮುಂಜೂರಾದ ಹಣ ಐದು ಲಕ್ಷ ರೂಪಾಯಿ, ಇದರಲ್ಲಿ ಅರ್ಧದಷ್ಟನ್ನು ಬಿಜಾಪುರ ಜಿಲ್ಲೆಗೆ ಕೊಟ್ಟಿದೆ. ಮಿಕ್ಕ ಎಲ್ಲ ಜಿಲ್ಲೆಗಳಿಗೂ ಒಟ್ಟು ಇನ್ನರ್ಧ ಕೊಟ್ಟಿದೆ, ಬಿಜಾಪುರ ಜಿಲ್ಲೆಗೆ ಏಕೆ ಇಷ್ಟು ಹೆಚ್ಚು ಕೊಟ್ಟಿರುವುದು?

ಶ್ರೀ ವಿ. ವೆಂಕಟಪ್ಪ.—ಅಲ್ಲಿ ಹೆಚ್ಚು 'ರೈಪ್' ಆಗಿದ್ದ ಕೇಸುಗಳಿದ್ದವು, ಅದರಿಂದ ಕೊಟ್ಟಿದೆ.

ಶ್ರೀ ಟಿ. ಕೆ. ಕಂಬ್ಳಿ.—ಒಟ್ಟು ಐದು ಲಕ್ಷ ರೂಪಾಯಿ ಕೊಟ್ಟಿರುವುದು ಯಾವ ಆಧಾರದಮೇಲೆ?

ಶ್ರೀ ವಿ. ವೆಂಕಟಪ್ಪ.—'ರೈಪ್' ಆದ ಕೇಸುಗಳೆಷ್ಟಿವೆ ಎಂದು ಲೆಕ್ಕಹಾಕಿ, ಅದರಂತೆ ಹಂಚುತ್ತಾರೆ.

ಶ್ರೀ ಟಿ. ಕೆ. ಕಂಬ್ಳಿ.—ಅವರು ಮೊದಲು ಬೇಡಿದುದು ಎಷ್ಟು ಹಣ? ಧಾರವಾಡ ಜಿಲ್ಲೆಗೆ ಎಷ್ಟು ಬೇಡಿದ್ದರು?

ಶ್ರೀ ವಿ. ವೆಂಕಟಪ್ಪ.—ಎಷ್ಟು ಬೇಡಿದ್ದು ಎಂಬ ಅಂಕಿ ನನ್ನಲ್ಲಿಲ್ಲ, ಇಷ್ಟು ಕೊಟ್ಟಿದೆ.

ಶ್ರೀ ಟಿ. ಕೆ. ಕಂಬ್ಳಿ.—1,30,000 ಯಾವ ಆಧಾರದ ಮೇಲೆ ಕೊಟ್ಟದ್ದು?

ಶ್ರೀ ವಿ. ವೆಂಕಟಪ್ಪ.—ಎಷ್ಟು ಕೇಸುಗಳು 'ರೈಪ್' ಆಗಿವೆ ಎಂದು ವಿದ್ಯಾಧಿಕಾರಿಗಳು ಕಳುಹಿಸಿದ್ದಾರೋ ಅದರ ಮೇಲೆ ಕೊಟ್ಟಿದೆ.

ಶ್ರೀ ಟಿ. ಕೆ. ಕಂಬ್ಳಿ.—'ರೈಪ್' ಆಗುವುದೆಂದರೇನು?

ಶ್ರೀ ವಿ. ವೆಂಕಟಪ್ಪ.—ಅಲ್ಲಿಯವರು ಇಷ್ಟು ಹಣ ಕೊಡಬೇಕೆಂದಿದೆ, ಅಷ್ಟು ಪೂರ್ತಿಯಾಗುವವರೆಗೆ 'ರೈಪ್' ಆಗಿದೆಯೆಂದು ಹೇಳುವುದಕ್ಕಾಗುವುದಿಲ್ಲ.

Sri J. H. SHAMSUDDIN.—What steps do Government propose to take so that the balance of the amount is not surrendered or allowed to lapse before 31st March?

ಶ್ರೀ ವಿ. ವೆಂಕಟಪ್ಪ.—ಇದರಲ್ಲಿ ಸರೆಂಡರ್ ಆಗುವ ಸಂಭವವಿಲ್ಲ. ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಕೊಟ್ಟಿದ್ದೇವೆ, ಅವರು ಅದನ್ನು ಖರ್ಚುಮಾಡುತ್ತಾರೆ.

ಅಧ್ಯಕ್ಷರು.—ಅವರಿಗೆ ಹಣ ತಲಪಿಲ್ಲವೆಲ್ಲ ಎಂದು ಕೇಳುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಆಗಲೇ ಹೇಳಿದ್ದೇನೆ. ತಕ್ಷಣ ಬರೆದುಕೊಟ್ಟರೆ ಅವರು ಹಣ ತೆಗೆದುಕೊಳ್ಳಬಹುದೆಂದು ಅಲ್ಲಿಂದ ಬಂದಿದ್ದವರಿಗೂ ಹೇಳಿದ್ದೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾಲ್ಕು ಜಿಲ್ಲೆಗಳ ಪೈಕಿ ಯಾರು ಯಾರು ಹಣ ಒಯ್ದಿದ್ದಾರೆ?

ಶ್ರೀ ವಿ. ವೆಂಕಟಪ್ಪ.—ನನಗೆ ಗೊತ್ತಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಗೊತ್ತುಮಾಡಿ ಕೊಳ್ಳುತ್ತೀರಾ?

ಶ್ರೀ ವಿ. ವೆಂಕಟಪ್ಪ.—ಮಾಡುತ್ತೇವೆ.

Sri M. N. NAGHNOOR.—Is it not a fact that at this rate the Government is unable to meet the requirements of the villagers in respect of school buildings?

Sri V. VENKATAPPA.—It does not arise out of this question.

Proposal to treat temporary teachers in District Board and Municipal High Schools on par with permanent employees.

Q.—618. Sri Y. VEERAPPA (Holenarasipur).—

Will the Government be pleased to state:—

whether there is any proposal to give permanancy to the teachers, in the different District Board and the Municipal High Schools in the State who are now not treated on par with permanent employees?

A.—Sri V. VENKATAPPA (Minister for Education.)—

The services of local candidates who are appointed as a temporary measure pending appointment of candidates approved by the Public Service Commission are terminable.

Sri Y. VEERAPPA.—I have no supplementaries.

Grant of lands to Harijans in South Kanara.

Q.—642. Sri MANJAPPA ULLAL (Karkal).—

Will the Government be pleased to state:—

(*a*) the total area of land reserved for Harijans in the South Kanara District during the last two years;

(*b*) the total area of land granted to Harijans on darkhast till now;

(*c*) whether any land reserved for Harijans has been granted on darkhast to persons other than Harijans?